## ‘ಬೇಚರಕ್’ ದೇವಿಪುರ ಗ್ರಾಮ ದೇವತೆ

ನಾಲ್ಕು ನೂರು ವರ್ಷಗಳ ಹಿಂದೆ, ಸಾಂಕ್ರಾಮಿಕ ರೋಗ ಪ್ಲೇಗ್ (ಗ್ರಾಮೀಣ ಭಾಷೆಯಲ್ಲಿ ಗುದ್ಯವ್ವನ ಬ್ಯಾನಿ) ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಜನವಸತಿ ಇದ್ದ ಪುಟ್ಟ ಗ್ರಾಮ ದೇವಿಪುರಕ್ಕೆ ಕಾಲಿಟ್ಟಾಗ ಗ್ರಾಮದ ಎಲ್ಲ ನಿವಾಸಿಗಳು ಊರನ್ನೇ ತೊರೆದಿದ್ದರಂತೆ. ನಂತರ ಈ ಊರಿಗೆ ‘ದೇವಿಪುರ ಬೇಚರಕ್’ ಗ್ರಾಮ (ಜನವಸತಿ ರಹಿತ ಗ್ರಾಮ – ಹಿಂದಿಯಲ್ಲಿ ಬೇ ಚಿರಾಗ್ – ದೀಪ ಹೊತ್ತಿಸದ ಗ್ರಾಮ) ಎಂದಾಯಿತಂತೆ. ಈ ಮಾಹಿತಿಯನ್ನು ಗ್ರಾಮದಲ್ಲಿ ಅಳವಡಿಸಿದ ಬೋರ್ಡ್‌ನಲ್ಲಿ ಉಲ್ಲೇಖಿಸಲಾಗಿದೆ.

ಚಾಲುಕ್ಯ, ಕದಂಬ, ರಾಷ್ಟ್ರಕೂಟ ರಾಜಮನೆತನಗಳಿಗೆ ಆರಾಧ್ಯ ದೇವತೆ ಆಗಿದ್ದ ಲೋಕಪರಮೇಶ್ವರಿದೇವಿಯ ವಿಗ್ರಹ ಇರುವ ಪುರಾತನ ಮಂದಿರದ ಮುಂಭಾಗದಲ್ಲಿ ರಾಷ್ಟ್ರಕೂಟರ ಶಾಸನಗಳಿವೆ. ಸುತ್ತೆಲ್ಲಾ ಆ ಗ್ರಾಮ ತೊರೆದು ಹೋದವರ ಜಮೀನು, ಪರಕೀಯರ ದಾಳಿಗೆ ಭಗ್ನಗೊಂಡ ಶಿವಲಿಂಗ ಹಾಗೂ ಅಲ್ಲಲ್ಲಿ ಹುತ್ತಗಳಿವೆ. ದೇವಿಪುರ ತೊರೆದು ಹೋದವರು ಪಕ್ಕದ ಗ್ರಾಮ ಹಿರೇಕೌಂಶಿ ಇನ್ನಿತರೆ ಕಡೆಗಳಿಂದ ದೇವಿಯ ವಾರದ ದಿನಗಳಲ್ಲಿ ಪೂಜಿಸಲು ಬಂದು ಹೋಗುತ್ತಾರೆಂದು ತಿಳಿಯಿತು.

–ಸೌಮ್ಯ ಶಿಗ್ಗಾಂವಕರ್, ಹಾಸನ





## ಕೂಗಲಬಳ್ಳಿ ತಾಂಬೂಲ ಪೆಟ್ಟಿಗೆ

ಎಲೆ ಅಡಿಕೆ ತಿನ್ನುವುದು ನಮ್ಮ ಭಾಗದ ಹೆಚ್ಚಿನ ಜನರ ಹವ್ಯಾಸ. ಹಾಗೆಯೇ ಹಿಂದೆಲ್ಲಾ ಮನೆಯ ಜಗುಲಿಯ ಮೂಲೆಯಲ್ಲೊಂದು ವಿಶಿಷ್ಟ ಆಕಾರದ ತಾಂಬೂಲ ಪೆಟ್ಟಿಗೆಗೂ ಜಾಗ ಮೀಸಲಿರುತ್ತಿತ್ತು. ಈ ತಾಂಬೂಲದ ಪೆಟ್ಟಿಗೆಗಳಲ್ಲೂ ವೈವಿಧ್ಯ ಕಾಣಬಹುದು. ಮರದ ಪೆಟ್ಟಿಗೆ, ತೆಂಗಿನ ಗೆರಟೆಯಿಂದ ಮಾಡಿದ ಪೆಟ್ಟಿಗೆ, ಕೂಗಲಬಳ್ಳಿ ಎಂಬ ಕಾಡುಬಳ್ಳಿಯಿಂದ ರಚನೆಗೊಂಡ ಪೆಟ್ಟಿಗೆ, ಹೀಗೆ ಪ್ರತೀ ಮನೆಗಳಲ್ಲೂ ವಿಶಿಷ್ಟ ವಿನ್ಯಾಸದ ತಾಂಬೂಲದ ಪೆಟ್ಟಿಗೆಗಳನ್ನು ನೋಡಬಹುದು.

ಮನೆಗೆ ಬರುವ ಅತಿಥಿಗಳು ಎಲೆ ಅಡಿಕೆ ತಿನ್ನದಿದ್ದರೂ, ವೈವಿಧ್ಯಮಯ ತಾಂಬೂಲ ಪೆಟ್ಟಿಗೆಗಳನ್ನು ನೋಡಿರುತ್ತಾರೆ. ಮನೆಗೆ ಬಂದವರಿಗೆ ಚಹಾ, ಕಾಫಿ, ತಿಂಡಿ ಕೊಟ್ಟು ಸತ್ಕರಿಸುವ ಪದ್ಧತಿ ಇದೆ. ಅವೆಲ್ಲ ಮುಗಿದ ಮೇಲೆ ತಾಂಬೂಲ ತಿನ್ನುವವರಿಗಾಗಿ ಅದೂ ಇದ್ದೇ ಇರುತ್ತದೆ. ಚಿತ್ರದಲ್ಲಿ ಕಾಣುವುದು ‘ಕೂಗಲಬಳ್ಳಿ’ ಎಂದು ಕರೆಯುವ, ಸ್ಥಳೀಯವಾಗಿ ಕಾಡುಬೆಟ್ಟಗಳಲ್ಲಿ ಸಿಗುವ ಒಂದು ಬಗೆಯ ಕಾಡುಜಾತಿಯ ಬಳ್ಳಿಯಿಂದ ನೇಯ್ದ ತಾಂಬೂಲ ಪೆಟ್ಟಿಗೆ. ಅಂದಾಜು ಐವತ್ತು ವರ್ಷಗಳಿಗೂ ಹಿಂದೆ ಇದನ್ನು ರಚಿಸಲಾಗಿದೆ. ಪ್ರತ್ಯೇಕ ಮೂರು ಕೋಣೆಗಳನ್ನು ಹೊಂದಿರುವ ಈ ತಾಂಬೂಲ ಪೆಟ್ಟಿಗೆ ಶಿರಸಿ ತಾಲ್ಲೂಕಿನ ಬಂದೀಸರ ಎಂಬ ಊರಿನ ಕೃಷಿಕರೊಬ್ಬರ ಮನೆಯಲ್ಲಿದೆ.

–ಜಿ.ಎಂ. ಬೊಮ್ನಳ್ಳಿ, ಶಿರಸಿ



## ಜನರಿಂದ ದೂರವಾದ ಅಂಟುವಾಳ

ಗ್ರಾಮೀಣ ಭಾಗದ ಜನರು ಹಿಂದೆ ತಮ್ಮ ಪ್ರದೇಶದಲ್ಲಿ ಸಿಗುವ ಉತ್ಪನ್ನಗಳನ್ನು ಬಳಕೆ ಮಾಡುತ್ತಿದ್ದರು. ಹಿಂದಿನ ಕಾಲದಲ್ಲಿ ಜನರು ಬಟ್ಟೆ ಒಗೆಯಲು, ಸ್ನಾನ ಮಾಡಲು ಬಳಕೆ ಮಾಡುತ್ತಿದ್ದ ಕಾಡು ಉತ್ಪತ್ತಿಯಾದ ಅಂಟುವಾಳದ ಉಪಯೋಗ ಜನಮಾನಸದಿಂದ ದೂರವಾಗುತ್ತಿದೆ. ಬೇಸಿಗೆ ಸಮಯದಲ್ಲಿ ಕಾಡಂಚಿನಲ್ಲಿ, ತಮ್ಮ ಜಮೀನಿನಲ್ಲಿ ಬೆಳೆದ ಅಂಟುವಾಳ ಮರ ಬಿಟ್ಟ ಕಾಯಿಗಳನ್ನು ಜನರು ಹೆಕ್ಕಿ ಪಾತ್ರೆ ತೊಳೆಯಲು, ಸ್ನಾನ ಮಾಡಲು ಬಳಕೆ ಮಾಡುತ್ತಿದ್ದರು. ಇಂದಿನ ರೆಡಿಮೇಡ್ ಕಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಂಟುವಾಳ ಕಾಯಿಗಳನ್ನು ಹೆಕ್ಕಿ ಅವುಗಳ ಉಪಯೋಗ ಮಾಡುವವರ ಸಂಖ್ಯೆ ಬಹಳ ಕಡಿಮೆಯಾಗಿದೆ.

ಸಾಕಷ್ಟು ಎತ್ತರ ಬೆಳೆಯುವ ಅಂಟುವಾಳ ಮರ ಯಾವುದೇ ಆರೈಕೆ ಇಲ್ಲದೆ ಬೆಳೆಯುತ್ತದೆ. ಚೆನ್ನಾಗಿ ಬೆಳೆದ ಒಂದು ಮರ ವರ್ಷಪೂರ್ತಿ ಒಂದು ಕುಟುಂಬಕ್ಕೆ ಬೇಕಾದಷ್ಟು ಕಾಯಿಗಳನ್ನು ಒದಗಿಸಬಲ್ಲದು. ಅಂಟುವಾಳ ಕಾಯಿಗಳು ಸುವಾಸನೆಯಿಂದ ಕೂಡಿದ್ದು, ಇದನ್ನು ಪುಡಿ ಮಾಡಿ ನೀರಿನ ಜೊತೆ ಮಿಶ್ರಣ ಮಾಡಿದಾಗ ಸಾಬೂನಿನಂತೆ ಚೆನ್ನಾಗಿ ನೊರೆ ಬರುತ್ತದೆ. ರಾಸಾಯನಿಕಗಳು ಇಲ್ಲದ ಕಾರಣ ಇದು ಆರೋಗ್ಯಕ್ಕೆ ಉತ್ತಮವಾಗಿದೆ. ಹಿಂದೆ ಅಂಟುವಾಳ ಮರದಿಂದ ಬೀಳುವ ಕಾಯಿಗಳನ್ನು ಸಂಗ್ರಹಿಸಿ ಜನರು ಮಾರುತ್ತಿದ್ದರು.

–ಅರುಣ್ ಕಿಲ್ಲೂರು